## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1231 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್.ಎಸ್ |
| ಉತ್ತರಿಸುವ ದಿನಾಂಕ | : | 13-03-2026 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರಗಳು |
|---|---|---|
| ಅ) | 2023-24, 2024-25 ಮತ್ತು 2025-26 ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗಗಳ ಕಲ್ಯಾಣಕ್ಕಾಗಿ ಎಸ್‌ಸಿಎಸ್‌ಪಿ/ಟಿಎಸ್‌ಪಿ ಯೋಜನೆಯಡಿ ಮೀಸಲಿಟ್ಟ ಅನುದಾನವೆಷ್ಟು; ಬಿಡುಗಡೆಯಾದ ಅನುದಾನವೆಷ್ಟು; ಈ ಅನುದಾನದಲ್ಲಿ ಸದರಿ ಸಾಲಿನಲ್ಲಿ (ಫೆಬ್ರುವರಿ-2026)ರ ಎಷ್ಟು ಮೊತ್ತವನ್ನು ರಾಜ್ಯ ಸರ್ಕಾರವು ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕಾಗಿ ಮೀಸಲಿರಿಸಿ ವರ್ಗಾಯಿಸಿದೆ; ವರ್ಗಾಯಿಸಿದ ಅನುದಾನದಲ್ಲಿ ಎಷ್ಟು ಮೊತ್ತವನ್ನು ಬಳಕೆ ಮಾಡಲಾಗಿದೆ; (ವರ್ಷವಾರು ಸಂಪೂರ್ಣ ಮಾಹಿತಿ ನೀಡುವುದು); | 2023-24, 2024-25 ಮತ್ತು 2025-26ನೇ ಆರ್ಥಿಕ ವರ್ಷದಲ್ಲಿ SCSP ಹಾಗೂ TSP ಅಡಿಯಲ್ಲಿ ಮೀಸಲಿಡಲಾದ, ಬಿಡುಗಡೆಯಾದ ಮತ್ತು ವೆಚ್ಚ ಮಾಡಿದ ಅನುದಾನದ ವಿವರಗಳನ್ನು ಹಾಗೂ ಗ್ಯಾರಂಟಿ ಯೋಜನೆಗಳಿಗೆ ಒದಗಿಸಲಾದ ಮೀಸಲಿಡಲಾದ, ಬಿಡುಗಡೆಯಾದ ಮತ್ತು ವೆಚ್ಚ ಮಾಡಿದ ಅನುದಾನದ ವಿವರ ಹಾಗೂ ಫಲಾನುಭವಿಗಳ ವಿವರಗಳನ್ನು ಅನುಬಂಧ-01 ರಲ್ಲಿ ನೀಡಿದೆ. |
| ಆ) | ಸದರಿ ಸಾಲಿನ ಫೆಬ್ರುವರಿ-2026 ಅಂತ್ಯದವರೆಗೆ ಎಷ್ಟು ಮೊತ್ತವನ್ನು ಗ್ಯಾರಂಟಿ ಯೋಜನೆಗಳಲ್ಲಿ ಫಲಾನುಭವಿಗಳಾಗಿರುವ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳಿಗೆ ವೆಚ್ಚ ಮಾಡಲಾಗಿದೆ; ಪ್ರತಿಯೊಂದು ಗ್ಯಾರಂಟಿ ಯೋಜನೆಯಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳ ಸಂಖ್ಯೆ ಎಷ್ಟು; (ಪ್ರತಿಯೊಂದು ಗ್ಯಾರಂಟಿ ಯೋಜನೆಯ ಅನುಸಾರ ಮಾತಿ ನೀಡುವುದು) | |
| ಇ) | ಪರಿಶಿಷ್ಟರ ಕಲ್ಯಾಣಕ್ಕಾಗಿ ಮೀಸಲಿಟ್ಟ ಹಣವನ್ನು ಗ್ಯಾರಂಟಿ ಯೋಜನೆಗೆ ವರ್ಗಾಯಿಸಿದ್ದಲ್ಲಿ, ಸದರಿ ಯೋಜನೆಯ ಹಣವನ್ನು ದುರ್ಬಳಕೆ ಮಾಡಿಕೊಂಡಂತೆ ಆಗುವುದಿಲ್ಲವೇ; ಎಸ್‌ಸಿಎಸ್‌ಪಿ/ಟಿಎಸ್‌ಪಿ ಕಾಯ್ದೆಯ ಉಲ್ಲಂಘನೆಯಾಗುವುದಿಲ್ಲವೇ; ದಲಿತರ ಕಲ್ಯಾಣಕ್ಕೆ ಹಿನ್ನಡೆಯಾಗುವುದಿಲ್ಲವೇ; | ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಧಿನಿಯಮ 2013ರ ಸೆಕ್ಷನ್ 7 (ಸಿ) ಪ್ರಕಾರ ಸಾಮಾನ್ಯ ಸಾಮಾಜಿಕ ವಲಯದ ಕಾರ್ಯಕ್ರಮಗಳಿಗೆ ಹಂಚಿಕೆಯಾಗುವ ಅನುದಾನದಲ್ಲಿ ಎಸ್.ಸಿ/ಎಸ್.ಟಿ ಫಲಾನುಭವಿಗಳ ಜನಸಂಖ್ಯೆಯ ಪ್ರಮಾಣಕ್ಕನುಗುಣವಾಗಿ ಎಸ್.ಸಿ. ಎಸ್.ಪಿ/ಟಿ.ಎಸ್.ಪಿ ಅಡಿಯಲ್ಲಿ ಅನುದಾನವನ್ನು ಹಂಚಿಕೆ ಮಾಡಿ ಉಪಯೋಗಿಸಲು ಅವಕಾಶ ಇರುತ್ತದೆ. |

| | | |
|---|---|---|
| ಈ) | ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಬಳಕೆ ಮಾಡಿರುವ ಹಣವನ್ನು ಮತ್ತೆ ಎಸ್‌ಸಿಎಸ್‌ಪಿ/ಟಿಎಸ್‌ಪಿ ಯೋಜನೆಯಲ್ಲಿ ವಿನಿಯೋಗ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ? | ಅದರಂತೆ ಪ್ರಾರಂಭದಿಂದಲೂ ಸದರಿ ಕಾಯ್ದೆಯ ಸೆಕ್ಷನ್ 7(ಸಿ) ಪ್ರಕಾರ ಶಿಕ್ಷಣ, ಆರೋಗ್ಯ, ಕೃಷಿ, ತೋಟಗಾರಿಕೆ, ನೀರಾವರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಯೋಜನಾ ಇಲಾಖೆ, ಇಂಧನ ಇಲಾಖೆ ಇತ್ಯಾದಿ ಇಲಾಖೆಗಳಲ್ಲಿ ಇಲ್ಲರಿಗೂ ಅನ್ವಯವಾಗುವ ಯೋಜನೆಗಳು ಜಾರಿಯಲ್ಲಿದ್ದು, ಸದರಿ ಯೋಜನೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳ ಸಮಗ್ರ ಅಭಿವೃದ್ಧಿಗಾಗಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿಯಲ್ಲಿ ಅನುದಾನವನ್ನು ಹಂಚಿಕೆ ಮಾಡಿ ಉಪಯೋಗಿಸಲಾಗುತ್ತಿದೆ.<br><br>ಅದರಂತೆ ಸಾಮಾಜಿಕ ವಲಯದ ಸಾಮಾನ್ಯ ಯೋಜನೆಗಳಾದ ಗ್ಯಾರಂಟಿ ಯೋಜನೆಗಳಡಿ ಎಸ್.ಸಿ/ಎಸ್.ಟಿ ಫಲಾನುಭವಿಗಳ ಜನಸಂಖ್ಯೆಗೆ ಅನುಗುಣವಾಗಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅನುದಾನವನ್ನು ಬಳಕೆ ಮಾಡಲಾಗುತ್ತಿದೆ. |

**ಸಕಇ 126 ಎಸ್‌ಎಲ್‌ಪಿ 2026**

**(ಡಾ: ಹೆಚ್.ಸಿ.ಮಹದೇವಪ್ಪ)**
**ಸಮಾಜ ಕಲ್ಯಾಣ ಸಚಿವರು**

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೇಶವ ಪ್ರಸಾದ್. ಎಸ್ (ವಿಧಾನಸಭಾ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ 1231 ಕ್ಕೆಅನುಬಂದ-01**

**ಕಳೆದ ಮೂರು ವರ್ಷಗಳಲ್ಲಿ SCSP- TSP ಗೆ ಹಂಚಿಕೆಯಾದ ಅನುದಾನದ ವಿವರಗಳು (ರೂ ಕೋಟಿಗಳಲ್ಲಿ)**

| ವರ್ಷ | ಹಂಚಿಕೆ | | | ಬಿಡುಗಡೆ | | | ವೆಚ್ಚ | | |
|---|---|---|---|---|---|---|---|---|---|
| | SCSP | TSP | ಒಟ್ಟು | SCSP | TSP | ಒಟ್ಟು | SCSP | TSP | ಒಟ್ಟು |
| 2023-24 | 25163.71 | 10058.13 | 35221.84 | 24524.16 | 9845.69 | 34369.85 | 24459.13 | 9786.63 | 34245.76 |
| 2024-25 | 28669.22 | 11288.55 | 39957.77 | 27852.97 | 10940.91 | 38793.88 | 27821.30 | 10896.44 | 38717.74 |
| 2025-26 (ದಿನಾಂಕ 02-03-2026 ರಲ್ಲಿದ್ದಂತೆ) | 30,537.42 | 12,136.17 | 42,673.59 | 20,589.05 | 7,763.44 | 28,352.49 | 18,447.34 | 6,950.81 | 25,398.14 |

**ಈ ಪೈಕಿ ಗ್ಯಾರಂಟಿ ಯೋಜನೆಗಳಿಗೆ ಒದಗಿಸಲಾದ ಅನುದಾನ ವಿವರಗಳು ಕೆಳಗಿನಂತಿದೆ. (ರೂ ಕೋಟಿಗಳಲ್ಲಿ)**

| ಗೃಹ ಲಕ್ಷ್ಮಿ ಯೋಜನೆ | | | | | | | | | | | | |
|---|---|---|---|---|---|---|---|---|---|---|---|---|
| ವರ್ಷ | ಹಂಚಿಕೆ | | | ಬಿಡುಗಡೆ | | | ವೆಚ್ಚ | | | ಫಲಾನುಭವಿಗಳ ಸಂಖ್ಯೆ | | |
| | SCSP | TSP | ಒಟ್ಟು | SCSP | TSP | ಒಟ್ಟು | SCSP | TSP | ಒಟ್ಟು | SC | ST | ಒಟ್ಟು |
| 2023-24 | 3500.00 | 1575.00 | 5075.00 | 3500.00 | 1575.00 | 5075.00 | 3500.00 | 1575.00 | 5075 | 21,87,500 | 8,66,983 | 30,54,483 |
| 2024-25 | 5879.85 | 2668.70 | 8548.55 | 5879.85 | 2668.70 | 8548.55 | 5879.85 | 2668.70 | 8548.55 | 22,16,816 | 8,87,433 | 31,04,249 |
| 2025-26 (ಫೆಬ್ರುವರಿ 2026 ರ ಅಂತ್ಯದವರೆಗೆ) | 5364.00 | 2074.06 | 7438.06 | 2852.75 | 1074.86 | 3927.65 | 2713.23 | 1031.71 | 3744.94 | 22,64,940 | 8,87,360 | 31,52,300 |

| ಅನ್ನಭಾಗ್ಯ | | | | | | | | | | | | |
|---|---|---|---|---|---|---|---|---|---|---|---|---|
| ವರ್ಷ | ಹಂಚಿಕೆ | | | ಬಿಡುಗಡೆ | | | ವೆಚ್ಚ | | | ಫಲಾನುಭವಿಗಳ ಸಂಖ್ಯೆ | | |
| | SCSP | TSP | ಒಟ್ಟು | SCSP | TSP | ಒಟ್ಟು | SCSP | TSP | ಒಟ್ಟು | SC | ST | ಒಟ್ಟು |
| 2023-24 | 1391.28 | 584.50 | 1975.78 | 1147.46 | 487.63 | 1635.09 | 1147.46 | 487.63 | 1635.09 | 60,01,209 | 26,27,989 | 86,29,198 |
| 2024-25 | 1154.39 | 486.30 | 1640.69 | 1154.39 | 486.30 | 1640.69 | 1114.58 | 475.10 | 1589.68 | 73,56,084 | 30,97,108 | 1,04,53,192 |
| 2025-26 (ಫೆಬ್ರುವರಿ 2026 ರ ಅಂತ್ಯದವರೆಗೆ) | 1156.68 | 514.08 | 1670.76 | 924.50 | 391.26 | 1315.77 | 924.50 | 391.26 | 1315.77 | 42,99,478 | 19,54,200 | 62,53,678 |

| ಯುವನಿಧಿ | | | | | | | | | | | | |
|---|---|---|---|---|---|---|---|---|---|---|---|---|
| ವರ್ಷ | ಹಂಚಿಕೆ | | | ಬಿಡುಗಡೆ | | | ವೆಚ್ಚ | | | ಫಲಾನುಭವಿಗಳ ಸಂಖ್ಯೆ | | |
| | SCSP | TSP | ಒಟ್ಟು | SCSP | TSP | ಒಟ್ಟು | SCSP | TSP | ಒಟ್ಟು | SC | ST | ಒಟ್ಟು |
| 2023-24 | 47.50 | 20.00 | 67.5 | 47.50 | 20.00 | 67.5 | 2.58 | 1.12 | 3.70 | 4,751 | 2,107 | 6,858 |
| 2024-25 | 41.46 | 13.00 | 54.46 | 41.46 | 13.00 | 54.46 | 54.06 | 22.79 | 76.85 | 32,112 | 12,890 | 45,002 |
| 2025-26 (ಫೆಬ್ರುವರಿ 2026 ರ ಅಂತ್ಯದವರೆಗೆ) | 114.00 | 48.00 | 162.00 | 114.00 | 48.00 | 162.00 | 106.32 | 43.92 | 150.24 | 42,872 | 17,566 | 60,438 |

| ಗೃಹ ಜ್ಯೋತಿ | | | | | | | | | |
|---|---|---|---|---|---|---|---|---|---|
| ವರ್ಷ | ಹಂಚಿಕೆ | | | ಬಿಡುಗಡೆ | | | ವೆಚ್ಚ | | |
| | SCSP | TSP | ಒಟ್ಟು | SCSP | TSP | ಒಟ್ಟು | SCSP | TSP | ಒಟ್ಟು |
| 2023-24 | 1066.16 | 495.76 | 1561.92 | 1066.16 | 495.76 | 1561.92 | 1066.16 | 495.76 | 1561.92 |
| 2024-25 | 1678.90 | 773.31 | 2452.21 | 1678.90 | 773.31 | 2452.21 | 1678.90 | 773.31 | 2452.21 |
| 2025-26 (ಫೆಬ್ರುವರಿ 2026 ರ ಅಂತ್ಯದವರೆಗೆ) | 1818.00 | 808.00 | 2626.00 | 1587.90 | 707.38 | 2295.28 | 1587.90 | 707.38 | 2295.28 |

2011 ರ ಜನಗಣತಿಯ ಪ್ರಕಾರ ರಾಜ್ಯದಲ್ಲಿ 21.78 ಲಕ್ಷ ಪರಿಶಿಷ್ಟ ಜಾತಿಯ ಕುಟುಂಬ ಹಾಗೂ 8.76 ಲಕ್ಷ ಪರಿಶಿಷ್ಟ ಪಂಗಡದ ಕುಟುಂಬಗಳು ಇರುತ್ತವೆ. ಇಂಧನ ಇಲಾಖೆಯ ಗೃಹಜ್ಯೋತಿ ಯೋಜನೆಯಡಿ ಮಾಸಿಕ 200 ಯುನಿಟ್‌ಗಳಿಗಿಂತ ಕಡಿಮೆ ವಿದ್ಯುತ್ ಬಳಸುವ ಎಲ್ಲಾ ಕುಟುಂಬಗಳಿಗೆ ಉಚಿತ ವಿದ್ಯುತ್ ಸೌಲಭ್ಯ ಒದಗಿಸಲಾಗುತ್ತಿದೆ. ಯೋಜನೆಯ ಸೌಲಭ್ಯ ಪಡೆದ ಪ.ಜಾತಿ ಮತ್ತು ಪ.ಪಂಗಡದ ಕುಟುಂಬಗಳ ನಿಖರ ಅಂಕಿ ಅಂಶಗಳನ್ನು ನೀಡಲು ಇಂಧನ ಇಲಾಖೆಯನ್ನು ಕೋರಲಾಗಿರುತ್ತದೆ.

| ಶಕ್ತಿ | | | | | | | | | |
|---|---|---|---|---|---|---|---|---|---|
| ವರ್ಷ | ಹಂಚಿಕೆ | | | ಬಿಡುಗಡೆ | | | ವೆಚ್ಚ | | |
| | SCSP | TSP | ಒಟ್ಟು | SCSP | TSP | ಒಟ್ಟು | SCSP | TSP | ಒಟ್ಟು |
| 2023-24 | 640.000 | 288.00 | 928.00 | 640.00 | 288.00 | 928.00 | 640.00 | 288.00 | 928.00 |
| 2024-25 | 1001.00 | 450.45 | 1451.45 | 1001.00 | 450.45 | 1451.45 | 1001.00 | 450.45 | 1451.45 |
| 2025-26 **(ಫೆಬ್ರವರಿ 2026 ರ ಅಂತ್ಯದವರೆಗೆ)** | 1060.00 | 477.00 | 1537.00 | 971.66 | 437.24 | 1408.90 | 971.66 | 437.24 | 1408.90 |

2011 ರ ಜನಗಣತಿಯ ಪ್ರಕಾರ ರಾಜ್ಯದಲ್ಲಿ 52 ಲಕ್ಷ ಪರಿಶಿಷ್ಟ ಜಾತಿಯ ಮತ್ತು 21 ಲಕ್ಷ ಪರಿಶಿಷ್ಟ ಪಂಗಡದ ಮಹಿಳೆಯರು ಇರುತ್ತಾರೆ.

ಸಾರಿಗೆ ಇಲಾಖೆಯಿಂದ ನೀಡಿರುವ ಮಾಹಿತಿಯಂತೆ ಶಕ್ತಿ ಯೋಜನೆಯಡಿ 2023-24ನೇ ಸಾಲಿನಲ್ಲಿ 183 ಕೋಟಿ ಸಂಖ್ಯೆಯ, 2024-25ನೇ ಸಾಲಿನಲ್ಲಿ 244.65 ಕೋಟಿ ಹಾಗೂ 2025-26ನೇ ಸಾಲಿನಲ್ಲಿ 252.65 ಕೋಟಿ ಸಂಖ್ಯೆಯ ಉಚಿತ ಟಿಕೇಟ್‌ಗಳನ್ನು ಮಹಿಳಾ ಪ್ರಯಾಣಿಕರಿಗೆ ನೀಡಲಾಗಿದೆ. ಅದರಲ್ಲಿ ಎಸ್. ಸಿ. /ಎಸ್. ಟಿ. ಮಹಿಳೆಯರು ಸಹ ಸೇರಿರುತ್ತಾರೆ. ಯೋಜನೆಯ ಸೌಲಭ್ಯ ಪಡೆದ ಪ.ಜಾತಿ ಮತ್ತು ಪ.ಪಂಗಡದ ಮಹಿಳೆಯರ ನಿಖರ ಅಂಕಿ ಅಂಶಗಳನ್ನು ನೀಡಲು ಸಾರಿಗೆ ಇಲಾಖೆಯನ್ನು ಕೋರಲಾಗಿರುತ್ತದೆ

ಆಯುಕ್ತರು,
ಸಮಾಜ ಕಲ್ಯಾಣ ಇಲಾಖೆ,
ಬೆಂಗಳೂರು.